JUNE 01, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಭಾರತೀಯ ಜವಳಿ ಕ್ಷೇತ್ರದ, ಸ್ಪರ್ಧಾತ್ಮಕತೆ ಬಲಪಡಿಸಲು,** ಕೇಂದ್ರ ಸರ್ಕಾರ, ಹತ್ತಿ ಆಮದು ಮೇಲಿನ ಅಬಕಾರಿ ಸುಂಕಕ್ಕೆ, ತಾತ್ಕಾಲಿಕ ವಿನಾಯಿತಿ ಪ್ರಕಟಿಸಿದೆ. ಈ ವಿನಾಯಿತಿ, ಅಕ್ಟೋಬರ್ 31ರ ವರೆಗೆ ಜಾರಿಯಲ್ಲಿರಲಿದೆ. ಹತ್ತಿ ಬೆಳೆಗಾರರು ಹಾಗೂ ಹತ್ತಿ ಉತ್ಪನ್ನಗಳ ಮೌಲ್ಯ ಸರಪಳಿಯ, ಸಂಪೂರ್ಣ ಕ್ಷೇತ್ರದ ಹಿತಾಸಕ್ತಿಯನ್ನು ಗಮನಿಸಿ, ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು, ಕೇಂದ್ರ ಜವಳಿ ಸಚಿವಾಲಯದ ಅಧಿಸೂಚನೆ, ತಿಳಿಸಿದೆ. ಆಮದು ಸುಂಕದ ತಾತ್ಕಾಲಿಕ ವಿನಾಯಿತಿಯಿಂದ, ಜವಳಿ ಉದ್ದಿಮೆಗಳಿಗೆ, ಸೂಕ್ತ ಹತ್ತಿ ಲಭ್ಯತೆ ಹಾಗೂ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ, ಲಾಭವಾಗಲಿದೆ ಎಂದು, ಸಚಿವಾಲಯ ಹೇಳಿದೆ.

<><><>

**ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶಿಫಾರಸಿನಂತೆ,** ಸಾರಜನಕದ ಪ್ರಮಾಣ, ಒಂದು ಎಕರೆಗೆ 20 ಕಿಲೋ, ಹಾಗೂ 45 ಕಿಲೋ ಯೂರಿಯಾ ನೀಡಬೇಕು; ಉತ್ತಮ ಇಳುವರಿ ಹಾಗೂ ಮಣ್ಣಿನ ಫಲವತ್ತತೆ ಕಾಪಾಡಲು, ಸಂಯುಕ್ತ ರಾಸಾಯನಿಕ ರಸಗೊಬ್ಬರಗಳನ್ನು ಬಳಕೆ ಮಾಡಬೇಕು ಎಂದು, ಕೃಷಿ ಇಲಾಖೆ, ಜಂಟಿ ನಿರ್ದೇಶಕಿ ಕಲಾವತಿ, ರೈತರಲ್ಲಿ ಮನವಿ ಮಾಡಿದ್ದಾರೆ.

<><><>

**ಕರ್ನಾಟಕ ಸೇರಿದಂತೆ** ಒಟ್ಟು 12 ರಾಜ್ಯಗಳಿಗೆ, ಪ್ರಧಾನಮಂತ್ರಿ ಆವಾಸ ಯೋಜನಾ–ಗ್ರಾಮೀಣ ಅಡಿ, ಮನೆ ನಿರ್ಮಾಣಕ್ಕಾಗಿ ಒಟ್ಟು 10 ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು, ಕೇಂದ್ರ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಶಿವರಾಜ ಸಿಂಗ್ ಚೌಹಾಣ್ ತಿಳಿಸಿದ್ದಾರೆ. ಹೊಸದಿಲ್ಲಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಅವರು ಈ ಮಾಹಿತಿ ನೀಡಿದರು. ಪಿ.ಎಂ.ಎ.ವಾಯ್, ಯೋಜನೆಯಡಿ, 2024–25 ನೇ ಸಾಲಿನಲ್ಲಿ, ವಿಜಯಪುರ ಜಿಲ್ಲೆಯಲ್ಲಿ, ಒಟ್ಟು 28 ಸಾವಿರದ 55 ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಚಂದ್ರಕಾಂತ ಕುಂಬಾರ.

<><><>

**ಬೆಂಗಳೂರು–ಹಾಸನ–ಮಂಗಳೂರು** ಮಾರ್ಗವಾಗಿ, ಸೊಲ್ಲಾಪುರ ತೆರಳುವ ಎಕ್ಸಪ್ರೆಸ್ ರೈಲು ನಿಲುಗಡೆಗೆ, ಚನ್ನರಾಯಪಟ್ಟಣ ರೈಲು ನಿಲ್ದಾಣದಲ್ಲಿ, ರೇಲ್ವೆ ಖಾತೆ, ರಾಜ್ಯ ಸಚಿವ ವಿ.ಸೋಮಣ್ಣ ನಿಶಾನೆ ತೋರಿದರು.

<><><>

**ಇಂದು ರಾಜ್ಯಾದ್ಯಂತ ಶಾಲೆಗಳು** ಪುನಾರಂಭಗೊಂಡಿವೆ. ವಿವಿಧ ಜಿಲ್ಲೆಗಳ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ, ವಿದ್ಯಾರ್ಥಿಗಳನ್ನು ಸ್ವಾಗತಿಸಿ, ಸಿಹಿ ಹಂಚಿ, ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಲಾಯಿತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ನಿಯೋಜಿತ ಮುಖ್ಯಮಂತ್ರಿ, ಡಿ.ಕೆ ಶಿವಕುಮಾರ, ವಿದ್ಯಾರ್ಥಿಗಳಿಗೆ ಹೊಸ ಶೈಕ್ಷಣಿಕ ವರ್ಷದ ಶುಭಾಶಯಗಳನ್ನು ತಿಳಿಸಿದ್ದಾರೆ.

<><><>

**ರಾಜ್ಯ ರಸ್ತೆ ಸಾರಿಗೆ ನಿಗಮಗಳು,** ಪ್ರಸಕ್ತ ಶೈಕ್ಷಣಿಕ ವರ್ಷದ, ಉಚಿತ ಹಾಗೂ ರಿಯಾಯಿತಿ ವಿದ್ಯಾರ್ಥಿ ಬಸ್ ಪಾಸ್ ವಿತರಣೆ, ಮೊನ್ನೆ 29 ರಿಂದ ಆರಂಭಿಸಿದ್ದು, ಸೇವಾಸಿಂಧು ಪೋರ್ಟಲ್ ನಲ್ಲಿ, ಆನ್ ಲೈನ್ ಅರ್ಜಿ ಸಲ್ಲಿಸಲು, ಕೋರಿವೆ.

<><><>

**ಭಾರತೀಯ ಸಂಗೀತ ಕ್ಷೇತ್ರದ ಶ್ರೇಷ್ಠ ಹಿನ್ನೆಲೆ ಗಾಯಕಿ,** ಪದ್ಮಭೂಷಣ, ಸುಮನ್ ಕಲ್ಯಾಣಪುರ, ನಿನ್ನೆ ಮುಂಬೈನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಕನ್ನಡ, ಹಿಂದಿ, ಮರಾಠಿ ಸೇರಿದಂತೆ ವಿವಿಧ ಭಾರತೀಯ ಭಾಷೆಗಳ, ಸಾವಿರಾರು ಗೀತೆಗಳಿಗೆ ಅವರು ಧ್ವನಿ ನೀಡಿದ್ದರು. ಸುಮನ್ ಕಲ್ಯಾಣಪುರ ನಿಧನಕ್ಕೆ ಗಣ್ಯರು ಕಂಬನಿ ಮಿಡಿದಿದ್ದು, ಸಂತಾಪ ಸೂಚಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ,** ಕೇಂದ್ರದ ಎನ್.ಡಿ.ಎ ಸರ್ಕಾರ, ಈ ತಿಂಗಳ 7ನೇ ತಾರೀಖು, 12 ವರ್ಷಗಳ ಅಧಿಕಾರಾವಧಿಯನ್ನು, ಯಶಸ್ವಿಯಾಗಿ ಪೂರೈಸಲಿದೆ. ತನ್ನಿಮಿತ್ತ, ಸರ್ಕಾರದ ವಿವಿಧ, ಜನಪರ ಯೋಜನೆಗಳ, ಜನ ಜಾಗೃತಿ ಕಾರ್ಯಕ್ರಮ, ಬೆಳಗಾವಿ ಬಿಜೆಪಿ ಘಟಕ ಆಯೋಜಿಸಲಿದೆ ಎಂದು, ಜಿಲ್ಲಾಧ್ಯಕ್ಷ ಸುಭಾಷ ಪಾಟೀಲ ತಿಳಿಸಿದ್ದಾರೆ.

<><><>

**ಸತತ ಎರಡನೇ ಬಾರಿಗೆ** ಐಪಿಎಲ್ ಟಿ.20 ಪ್ರಶಸ್ತಿ ಜಯಿಸಿದ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ, ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ, ನಿಯೋಜಿತ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಷಿ ಸೇರಿದಂತೆ ಗಣ್ಯರು ಅಭಿನಂದನೆ ಸಲ್ಲಿಸಿ, ಶುಭ ಹಾರೈಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>